**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ :05.02.2025**

**ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದ :**

ದಾವ ಸ್ವತ್ತು ಬೆಟ್ಟನಹಳ್ಳಿ ಗ್ರಾಮದ ಸರ್ವೆ ನಂಬರ್ 195/1, 1 ಎಕರೆ 26 ಗುಂಟೇ ಜಮೀನು ಆಗಿರುತ್ತದೆ. ಬೆಟ್ಟನಹಳ್ಳಿಯ ಪಕ್ಕದ ಜಮೀನಿನ ನಾಗರಾಜ್ ಎಂಬುವವರು ದಾವ ಸ್ವತ್ತು ಮಾರಾಟಕಿದೆ ಎಂದು ತಿಳಿಸಿರುತ್ತಾರೆ. ನನಗೆ ಪ್ರತಿವಾದಿಗಳ ಪರಿಚಯ ಮೊದಲಿನಿಂದ ಇರಲಿಲ್ಲ. ನಾನು ಖಾಸಗಿ ಪ್ಯಾಕೇಜಿಂಗ್ ಫ್ಯಾಕ್ಟರಿ ಮಾಲೀಕನ್ನಾಗಿರುತ್ತೇನೆ. ನಾನು ಬಡ್ಡಿ ಲೇವಾದೇವಿ ಮಾಡುತ್ತೇನೆಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿದಾರ. ನಾಗರಾಜ್‌ರವರು ಮುನಿರಾಜ್‌ರವರಿಗೆ ಸಾಲ ಬೇಕಾಗಿರುವುದರಿಂದ ಅವರನ್ನು ಕರೆದುಕೊಂಡು ಬಂದು ನನ್ನಿಂದ ಸಾಲ ಕೊಡಿಸಿರುತ್ತಾರೆಂದರೆ ಸರಿಯಲ್ಲ. ನಾನು ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ಮೂಲ ಪತ್ರಗಳನ್ನು ನೋಡಿರುತ್ತೇನೆ. ಪಹಣಿ 1 ನೇ ಪ್ರತಿವಾದಿ ಮತ್ತು ಮುನಿರಾಜ್‌ರವರ ಹೆಸರಿನಲ್ಲಿತ್ತು. ದಾವ ಸ್ವತ್ತಿನ ಬಗ್ಗೆ ಒಂದು ದಾವೆ ಚಾಲ್ತಿಯಲ್ಲಿರುವುದರಿಂದ ನೊಂದಣಿ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ವಾದ ಪತ್ರದಲ್ಲಿ ಸದರಿ ದಾವೆ ಬಗ್ಗೆ ನಮೂದಿಸಿರುತ್ತೇನೆ. ಕರಾರು ಪತ್ರದಲ್ಲಿ ಆ ಬಗ್ಗೆ ನಮೂದಿಸಿರುವುದಿಲ್ಲ. ನಾನು ಹೇಳುವಂತೆ ಯಾವುದೇ ಪ್ರಕರಣ ಬಾಕಿ ಇರಲಿಲ್ಲ ಸಾಲದ ವ್ಯವಹಾರ ಆಗಿರುವುದರಿಂದ ನಾನು ಕ್ರಯ ಪತ್ರ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಛಾಪ ಕಾಗದವನ್ನು ಪ್ರತಿವಾದಿಗಳು ಮುದ್ರಾಂಕ ಶುಲ್ಕ ಪಾವತಿಸಿ ಖರೀದಿಸಿರುತ್ತಾರೆ. ಕರಾರು ಪತ್ರಕ್ಕೆ 500 ರೂಪಾಯಿ ಮುದ್ರಾಂಕ ಶುಲ್ಕ ಪಾವತಿಸಿರಬಹುದು ಸರಿಯಾಗಿ ಗೊತ್ತಿಲ್ಲ. ಕರಾರು ಪತ್ರದಲ್ಲಿ ಚೆಕ್‌ಗಳ ದಿನಾಂಕಗಳನ್ನು ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ಕರಾರಿಗೆ ಸಹಿ ಮಾಡುವ ಪೂರ್ವದಲ್ಲಿ ಚೆಕ್ ನಂಬರ್ ಗಳನ್ನು ನಮೂದಿಸಿರುತ್ತೇವೆ. ಕರಾರು ಪತ್ರವನ್ನು ಪ್ರತಿವಾದಿಗಳು ತಯಾರಿಸಿರುತ್ತಾರೆ. ಕರಾರು ಪತ್ರಕ್ಕೆ ಪ್ರತಿವಾದಿಗಳ ಮನೆಯಲ್ಲಿ ಸಹಿ ಮಾಡಿರುತ್ತೇವೆ. ಕರಾರು ಪತ್ರಕ್ಕೆ ಸಹಿ ಮಾಡುವಾಗ 1 ಮತ್ತು 2 ನೇ ಪ್ರತಿವಾದಿಗಳು, ಮುನಿರಾಜ್, ಸಾಕ್ಷಿದಾರರಾದ ನಾಗರಾಜ್ ಮತ್ತು ಪ್ರತಿವಾದಿಯ ಕಡೆಯ ಇನ್ನೊಬ್ಬರು ಇದ್ದರು. 2022 ರಲ್ಲಿ ಕರಾರು ಪತ್ರ ಮುದ್ರಾಂಕ ಶುಲ್ಕ ದಂಡವನ್ನು ನಾನು ಪಾವತಿಸಿರುತ್ತೇನೆ. ನಾನು 2022 ರಲ್ಲಿ ಖಾಲಿ ಕಾಗದದ ಮೇಲೆ ಕರಾರು ಪತ್ರವನ್ನು ತಯಾರಿಸಿ ಅದರಂತೆ ಮುದ್ರಾಂಕ ಶುಲ್ಕ ಪಾವತಿಸಿಕೊಂಡಿದ್ದೇನೆಂದರೆ ಸರಿಯಲ್ಲ. ಕರಾರು ಪತ್ರ ಮಾಡಿಕೊಳ್ಳುವಾಗ ಪಹಣಿ ಪತ್ರಿಕೆಯಲ್ಲಿ ನಾನು ಹೇಳಿದ ಪ್ರಕರಣದ ಬಗ್ಗೆ ನಮೂದು ಇರಲಿಲ್ಲ. ಸದರಿ ಪ್ರಕರಣದಲ್ಲಿ ಯಾವುದಾದರೂ ತಡಾಜ್ಞೆ ಇತ್ತೊ ಎಂದು ನನಗೆ ಗೊತ್ತಿಲ್ಲ. ಕರಾರು ಪತ್ರ ಮಾಡಿಕೊಳ್ಳುವಾಗ ಪಹಣಿ 1 ನೇ ಪ್ರತಿವಾದಿ ಮತ್ತು ಮುನಿರಾಜ್‌ರವರ

ಹೆಸರಿನಲ್ಲಿತ್ತು. ನಾನು ನೀಡಿರುವ ಸಾಲದ ಹಣಕ್ಕೆ ಮುನಿರಾಜ್‌ರವರು ಪ್ರತಿ ತಿಂಗಳು ಬಡ್ಡಿ ಪಾವತಿಸಿರುತ್ತಾರೆಂದರೆ ಸರಿಯಲ್ಲ. ನಾನು ವಕೀಲರ ಮುಖಾಂತರ ನೋಟಿಸ್ ನೀಡಿದ್ದಾಗ ನನ್ನ ಖಾತೆಯಲ್ಲಿ ಬಾಕಿ ಕ್ರಯದ ಮೊಬಲಗು ಇರಲಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯ ಪತ್ರ ಮಾಡಿಕೊಡುವಂತೆ ಪ್ರತಿವಾದಿಗಳ ಮನೆಗೆ 6-7 ಸಲ ಹೋಗಿ ಕೇಳಿರುತ್ತೇನೆ. ಪ್ರತಿವಾದಿಗಳ ಮೂಲ ದಾಖಲೆಗಳು ಅವರ ಮನೆ ಇದ್ದವು. ನಾನು ಸದರಿ ದಾಖಲೆಗಳನ್ನು 01.08.2019 ರಂದು ಪ್ರತಿವಾದಿಗಳ ಮನೆಯಲ್ಲಿ ನೋಡಿರುತ್ತೇನೆ. ಮೂಲ ದಾಖಲೆಗಳನ್ನು ನನಗೆ ನೀಡುವಂತೆ ನಾನು ಕೇಳಿರುವುದಿಲ್ಲ. ನಾನು ಮುನಿರಾಜ್‌ರವರಿಗೆ ಸಾಲ ನೀಡಿದ್ದು, ಆ ಸಮಯದಲ್ಲಿ ಖಾಲಿ ಕಾಗದದ ಮೇಲೆ ಸಹಿ ಪಡೆದ್ದು, ಕ್ರಯದ ಕರಾರು ಪತ್ರ ಸೃಷ್ಟಿ ಮಾಡಿ ಈ ಸುಳ್ಳು ದಾವೆ ದಾಖಲಿಸಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿ ಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ..**